ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 6, MAY-JUNE 2022, Pp. 54-62.
©IIMRD, Mysuru

www.iimrd.com

# ಕಿಸಾನ್ ನಿರ್ಭರ್ ಭಾರತ್: ಒಂದು ಅಧ್ಯಯನ

**ಲಕ್ಷ್ಮಿ ಕೆ.ಎಸ್*** **ಮತ್ತು ಡಾ. ನಾಗರಾಜ. ಎಸ್****

*ಸಂಶೋಧಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಸಂಶೋಧನಾ ವಿಭಾಗ,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಸಹಾಯಕ ಪ್ರಾಧ್ಯಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಸಂಶೋಧನಾ ವಿಭಾಗ,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

**ಸಾರಾಂಶ: (Abstract)**

*ಭಾರತದ ಜೀವನಾಡಿಯೇ ಕೃಷಿ. ಭಾರತದ ಆರ್ಥಿಕ ವ್ಯವಸ್ಥೆಗೆ ಬಲುಪಾಲು ಕೊಡುಗೆಯನ್ನು ನೀಡುತ್ತಿರುವಂತಹ ಈ ಕ್ಷೇತ್ರಕ್ಕೆ ಭಾರತ ಸರ್ಕಾರವು ಹೀಗಾಗಲೇ ಅನೇಕ ಯೋಜನೆಗಳನ್ನು ರೂಪಿಸಿರುವುದನ್ನು ಇತಿಹಾಸದ ಉದ್ದಕ್ಕೂ ಕಾಣಬಹುದು. ಪಂಚವಾರ್ಷಿಕ ಯೋಜನೆಗಳಲ್ಲೂ ಸಹ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿ ಅದರ ಅಭಿವೃದ್ಧಿಗೆ ಹೆಚ್ಚಿನ ಅನುದಾನವನ್ನು ಮೀಸಲಿಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಕೋವಿಡ್ 19 ಸಾಂಕ್ರಾಮಿಕ ರೋಗದಿಂದಾಗಿ ಭಾರತವು ಆರ್ಥಿಕವಾಗಿ ತತ್ತರಿಸಿದ್ದು, ಕೃಷಿ ಕ್ಷೇತ್ರವು ಸಹ ಅನೇಕ ಸಮಸ್ಯೆಗಳನ್ನು ಎದುರಿಸಿತು. ಈ ಸಮಸ್ಯೆಗಳನ್ನು ಸರಿಪಡಿಸುವ ಉದ್ದೇಶ ಭಾರತದ ಕೇಂದ್ರ ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸಿತು. ಅವುಗಳಲ್ಲಿ ಪ್ರಮುಖವಾದ ಯೋಜನೆ ಎಂದರೆ ಆತ್ಮ ನಿರ್ಭರ ಭಾರತ ಯೋಜನೆ ಆಗಿದೆ. ಪ್ರಸ್ತುತ ಲೇಖನದಲ್ಲಿ ಈ ಯೋಜನೆ ಕುರಿತು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಕೃಷಿ, ಆತ್ಮನಿರ್ಭರ್ ಭಾರತ್, ಸಮಾಜಶಾಸ್ತ್ರ, ಅಭಿವೃದ್ಧಿ ಯೋಜನೆಗಳು.

ಸ

**ಪೀಠಿಕೆ**

ಆತ್ಮ ನಿರ್ಭರ್ ಭಾರತ್ ಯೋಜನೆಯು ವಿವಿಧ ವಲಯಗಳಿಗೆ ಹಣಕಾಸಿನ ನೆರವು ನೀಡುವುದರ ಜೊತೆಗೆ ಅವುಗಳ ಸುಸ್ಥಿರ ಅಭಿವೃದ್ಧಿ ಮಾಡಿ ಸ್ವಾವಲಂಬನೆ ಮೂಡಿಸುವುದಾಗಿದೆ. ಯೋಜನೆಯಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು, ರೈತರಿಗೆ ಅನುಕೂಲವಾಗುವಂತಹ ಅನೇಕ ಕಾರ್ಯಕ್ರಮಗಳಾದ ಮಾರುಕಟ್ಟೆ ವಿಸ್ತರಣೆ, ಬೆಂಬಲ ಬೆಲೆ ನೀಡಿಕೆ, ಪಿಎಂ ಕಿಸಾನ್ ಯೋಜನೆ ಮೂಲಕ ರೈತರಿಗೆ ಹಣ ಪಾವತಿ, ಸಾಲ ಮನ್ನಾ, ಸಾಲ ಮರು ಪಾವತಿಯ ಸಮಯದ ವಿಸ್ತರಣೆ ಹೀಗೆ ಇನ್ನೂ ಹಲವಾರು ಯೋಜನೆಗಳ ಮೂಲಕ ರೈತರ ಏಳಿಗೆಯನ್ನು ಸಾಧಿಸುವ ಉದ್ದೇಶವನ್ನು ಹೊಂದಿದೆ. ಈ ಹಿನ್ನಲೆಯಲ್ಲಿ ಕೃಷಿ ಮತ್ತು ರೈತರ ಮೇಲೆ ಅಗಾಧ ಪರಿಣಾಮ ಬೀರುತ್ತಿದೆ. ಕೃಷಿಯ ಅಭಿವೃದ್ಧಿ ಮಾಡುವುದರ ಜೊತೆಗೆ ರೈತರಿಗೆ

*Please cite this article as:* *ಲಕ್ಷ್ಮಿ ಕೆ ಎಸ್ ಮತ್ತು ಡಾ. ನಾಗರಾಜ ಎಸ್.* (2022). ಕಿಸಾನ್ ನಿರ್ಭರ್ ಭಾರತ್: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(6). ಪು.ಸಂ. 54–62.*

ಬೇಕಿರುವಂತ ಮೂಲಸೌಕರ್ಯಗಳನ್ನು ಬಲಪಡಿಸಿ, ಅವರಿಗೆ ಕೃಷಿಯಲ್ಲಿನ ಆಸಕ್ತಿಯನ್ನು ಉತ್ತೇಜಿಸಿ ಕೃಷಿ ವ್ಯಾವಹಾರಗಳನ್ನು ವೇಗಗೊಳಿಸುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಆತ್ಮ ನಿರ್ಭರ್ ಭಾರತ್ ಯೋಜನೆಯು ಮಹತ್ವದ್ದಾಗಿದೆ.

**ಅಧ್ಯಯನದ ಪ್ರಾಮುಖ್ಯತೆ**

ಸರ್ಕಾರಗಳು ತೆಗೆದುಕೊಂಡ ವಿವಿಧ ತಿರ್ಮಾನ, ಜಾಗತಿಕ ಮಟ್ಟದಲ್ಲಾದ ಆರ್ಥಿಕ ವ್ಯತ್ಯಯಗಳು, ಮತ್ತು ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಭಾರತವು ನಿರುದ್ಯೋಗ್ಯ ಸಮಸ್ಯೆ, ಆರ್ಥಿಕ ಮುಗಟ್ಟು, ವಲಸೆ ಕಾರ್ಮಿಕರ ಸಮಸ್ಯೆ, ಕೈಗಾರಿಕೋದ್ಯಮಗಳ ಸಮಸ್ಯೆ, ಬೀದಿ ವ್ಯಾಪಾರಿಗಳ ಸಮಸ್ಯೆ ಮತ್ತು ಕೃಷಿಕರ ಸಮಸ್ಯೆ ಹೀಗೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಇದನ್ನು ಮನಗಂಡ ಕೇಂದ್ರ ಸರ್ಕಾರವು ಆತ್ಮ ನಿರ್ಭರ್ ಭಾರತ ಎಂಬ ನೂತನ ಯೋಜನೆಯನ್ನು ಜಾರಿಗೆ ತಂದಿತು. ಆ ಮೂಲಕ ಭಾರತದಲ್ಲಿನ ಜೀವನವನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಅವರನ್ನು ಸ್ವಾವಲಂಬಿಗಳನ್ನಾಗಿಸುವುದು ಈ ಯೊಜನೆಯ ಮೂಲ ಉದ್ದೇಶವಾಗಿತ್ತು. ಈ ಯೋಜನೆಯಡಿಯಲ್ಲಿ ವಿವಿಧ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೃಷಿ ವಲಯಕ್ಕೆ ನೀಡಲಾಗಿದ್ದು, ಸಂದಿಗ್ಧ ಪರಿಸ್ಥಿತಿಯಲ್ಲಿ ಕೃಷಿ ವಲಯವನ್ನು ಅಭಿವೃದ್ಧಿಪಡಿಸಲು ಯಾವ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಿಕೊಳ್ಳಲಾಗಿದೆ ಎಂಬ ಅಂಶಗಳನ್ನು ತಿಳಿಯುವುದು ಅತ್ಯವಶ್ಯಕವಾಗಿದೆ.

**ಅಧ್ಯಯನದ ಉದ್ದೇಶಗಳು:**

- ಆತ್ಮ ನಿರ್ಭರ್ ಭಾರತ ಯೋಜನೆಯ ಪರಿಕಲ್ಪನೆ ಮತ್ತು ಯೋಜನೆಯ ಆರ್ಥಿಕ ಪ್ಯಾಕೇಜ್‌ನ ವಿಭಜನೆಯನ್ನು ತಿಳಿಸುವುದು.
- ಆತ್ಮ ನಿರ್ಭರ್ ಭಾರತ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ಕೈಗೊಂಡಿರುವ ಸುಧಾರಣಾ ಕ್ರಮಗಳು ಮತ್ತು ಕೃಷಿಗೆ ನೀಡಿರುವ ನೆರವನ್ನು ಚರ್ಚಿಸುವುದು.
- ಕರ್ನಾಟಕ ರಾಜ್ಯ ಸರ್ಕಾರವು ಆತ್ಮ ನಿರ್ಭರ್ ಭಾರತ ಯೋಜನೆಯಡಿಯಲ್ಲಿ ರಾಜ್ಯದ ರೈತರಿಗೆ ನೀಡಿರುವ ಸವಲತ್ತುಗಳ ತಿಳಿಯುವುದು.

**ಸಂಶೋಧನಾ ಅಧ್ಯಯನ ವಿಧಾನ ಮತ್ತು ಮಾಹಿತಿ ಸಂಗ್ರಹಣೆ**

ಪ್ರಸ್ತುತ ಅಧ್ಯಯನಕ್ಕೆ ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಮತ್ತು ಇತರ ಸಮಾಜಶಾಸ್ತ್ರೀಯ ಸಂಶೋಧನಾ ವಿಧಾನಗಳನ್ನು ಬಳಸಿಕೊಂಡು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಆತ್ಮ ನಿರ್ಭರ್ ಭಾರತ ಪರಿಕಲ್ಪನೆ**

ಆತ್ಮ ನಿರ್ಭರ್ ಭಾರತ ಪರಿಕಲ್ಪನೆಯು ಕೋವಿಡ್ 19 ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಮತ್ತು ಅದರ ನಂತರ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಜನರು ಸ್ವಾವಲಂಬಿಗಳಾಗಿ ಜೀವನ ನಿರ್ವಹಿಸುವುದು ಎಂದರ್ಥ. ಸ್ವಾವಲಂಬಿಗಳೆಂದಾಕ್ಷಣ ಅಂತರಾಷ್ಟ್ರೀಯ ವ್ಯಾಪಾರವೆಲ್ಲವನ್ನು

ಸ್ಥಗಿತಗೊಳಿಸಿ ಕೇವಲ ದೇಶೀಯ ಉತ್ಪನ್ನಗಳನ್ನು ಅಥವಾ ಸಂಪನ್ಮೂಲಗಳನ್ನು ಮಾತ್ರ ಬಳಸುವುದು ಎಂಬುದಲ್ಲ ಬದಲಾಗಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಮತ್ತು ತಂತ್ರಜ್ಞಾನ ವಿನಿಮಯಕ್ಕೂ ಅವಕಾಶ ಇರುತ್ತದೆ.

ಸುಮಾರು ಇಪ್ಪತ್ತು ಲಕ್ಷ ಕೋಟಿ ಪ್ಯಾಕೇಜ್‌ನಲ್ಲಿ ಸಮಾಜದಲ್ಲಿನ ಪ್ರತಿ ವಲಯಕ್ಕೂ ಹಂಚಿಕೆಯಾಗುವಂತೆ ಈ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯು ಭಾರತದ ಜಿಡಿಪಿ ದರವನ್ನು ಶೇ.10ರಷ್ಟು ಹೆಚ್ಚಿಸಬೇಕೆಂಬ ಆಶಯವನ್ನು ಹೊಂದಿರುತ್ತದೆ. ಮೂಲ ಸೌಕರ್ಯ ನಿರ್ಮಾಣ, ಕೃಷಿ, ಉದ್ಯಮಗಳಲ್ಲಿ ಸಕಾರಾತ್ಮಕವಾಗಿ ಬದಲಾಣೆ ತರುವ ಉದ್ದೇಶದಿಂದ ಪ್ರಧಾನ ಮಂತ್ರಯವರು **'ವೋಕಲ್ ಫಾರ್ ಲೋಕಲ್'** ಎಂಬ ಧ್ಯೇಯವನ್ನು ಪ್ರಸ್ತುತಪಡಿಸಿದ್ದಾರೆ.

ಆತ್ಮ ನಿರ್ಭರ್ ಭಾರತ ಯೋಜನೆಯ ಅಡಿಯಲ್ಲಿ 20 ಲಕ್ಷ ಕೋಟಿ ರೂಪಾಯಿಗಳ ಆರ್ಥಿಕ ಪ್ಯಾಕೇಜ್‌ನಲ್ಲಿ 3.10 ಲಕ್ಷ ಕೋಟಿ ರೂಪಾಯಿಗಳನ್ನು ವಲಸೆ ಕಾರ್ಮಿಕರು, ರಸ್ತೆ ಬದಿ ವ್ಯಾಪಾರಿಗಳಿಗೆ ಮತ್ತು ರೈತರಿಗೆ ಕಿಸಾನ್ ಕಾರ್ಡ್ ಮುಖಾಂತರ 2 ಲಕ್ಷ ಕೋಟಿಗಳನ್ನು ನೀಡುವ ಗುರಿಯನ್ನು ನಿಗದಿಪಡಿಸಲಾಗಿದ್ದು, 1.50 ಲಕ್ಷ ಕೋಟಿ ರೂಪಾಯಿಗಳನ್ನು ಕೃಷಿ ಮತ್ತು ಪೂರಕ ಚಟುವಟಿಕೆಗಳಾದ ಹೈನುಕಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕೆಗೆ ಮೀಸಲಿಡಲಾಗಿದೆ.

**ಆತ್ಮ ನಿರ್ಭರ್ ಭಾರತ ಯೋಜನೆಯಡಿಯಲ್ಲಿ ಕೃಷಿ**

ಭಾರತ ದೇಶವು ಕೃಷಿ ಪ್ರಧಾನವಾದ ರಾಷ್ಟ್ರವಾಗಿದ್ದು, ರೈತರೇ ಈ ದೇಶದ ಬೆನ್ನಲುಬು ಎನ್ನಬಹುದು. ಭಾರತದ ಆರ್ಥಿಕ ವ್ಯವಸ್ಥೆಗೆ ಕೃಷಿಯು ತನ್ನದೇ ಆದ ಕೊಡುಗೆಯನ್ನು ನೀಡುತ್ತ ಬಂದಿರುವುದನ್ನು ಕಾಣುತ್ತೇವೆ. ಭಾರತದ ಗ್ರಾಮೀಣ ಪ್ರದೇಶ ಜನರು ಕೃಷಿಯನ್ನು ತಮ್ಮ ಜೀವನದ ಉಸಿರನ್ನಾಗಿಸಿಕೊಂಡಿದ್ದಾರೆ. ಇಂತಹ ಸನ್ನಿವೇಶದಲ್ಲಿ ಸಾಂಕ್ರಾಮಿಕ ರೋಗದ ಅನೀರಿಕ್ಷಿತ ದಾಳಿಯಿಂದಾಗಿ ಕೃಷಿ ಕ್ಷೇತ್ರದ ಮೇಲೆ ಭಾರಿ ಪರಿಣಾಮ ಬೀರಿ ಕೃಷಿಯನ್ನು ನಂಬಿಕೊಂಡಿದ್ದ ಗ್ರಾಮೀಣ ಪ್ರದೇಶ ಜನರ ಜೀವನದ ಮೇಲೆ ಬರೆ ಎಳೆದಂತಾಗಿದೆ. ಅದನ್ನು ಸರಿಪಡಿಸುವ ಉದ್ದೇಶದಿಂದ ಆತ್ಮ ನಿರ್ಭರ್ ಭಾರತ ಯೋಜನೆಯಡಿಯಲ್ಲಿ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿ ಅದನ್ನು ಉನ್ನತ ಮಟ್ಟಕ್ಕೆ ತೆಗೆದು ಕೊಂಡು ಹೋಗಲು ಸಹಕಾರಿಯಾಗಿದೆ.

**ಆತ್ಮ ನಿರ್ಭರ್ ಭಾರತ ಯೋಜನೆಯಡಿಯಲ್ಲಿ ಕೃಷಿಗೆ ನೀಡಿರುವ ನೆರವು**

ಆತ್ಮ ನಿರ್ಭರ್ ಭಾರತ್ ಯೋಜನೆಯಡಿಯಲ್ಲಿ ಕೃಷಿ ವಲಯವನ್ನು ಸುಧಾರಿಸಿ ಅದನ್ನು ಅಭಿವೃದ್ಧಿಪಡಿಸುವಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಹೀಗಾಗಲೇ ಆ ಕಾರ್ಯಕ್ರಮಗಳು ರೈತರಿಗೆ ತಲುಪಿದ್ದು, ಆ ಮೂಲಕ ರೈತರಿಗೆ ಮತ್ತು ಕೃಷಿ ಕ್ಷೇತ್ರದ ಬೆಳವಣಿಗೆ ಸಹಾಯಕವಾಗಿದೆ. ಯೋಜನೆಯಡಿಯಲ್ಲಿ ಕೃಷಿ ಕ್ಷೇತ್ರಕ್ಕೆ ಉದ್ದೇಶಿತ ಸವಲತ್ತುಗಳು ಈ ಕೆಳಗಿನಂತಿವೆ.

- ಸುಮಾರು 73,400 ಕೋಟಿ ರೂಪಾಯಿ ಮೌಲ್ಯದಲ್ಲಿ ಲಾಕ್‌ಡೌನ್ ಸಮಯದಲ್ಲಿ ಕನಿಷ್ಠ ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವುದು.

- ಸುಮಾರು 18,700 ಕೋಟಿ ರೂಪಾಯಿಯನ್ನು ಪಿ.ಎಂ ಕಿಸಾನ್ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ವರ್ಗಾವಣೆ ಮಾಡುವುದು.
- ಸುಮಾರು 6,400 ಕೋಟಿ ರೂ ಗಳನ್ನು ಫಸಲ್ ಭೀಮಾ ಯೋಜನೆಯಡಿಯಲ್ಲಿ ರೈತರಿಗೆ ದೊರಕುವಂತೆ ಮಾಡುವುದು.
- ಸುಮಾರು 4.22 ಲಕ್ಷ ಕೋಟಿ ರೂಪಾಯಿಗಳನ್ನು ಕೃಷಿ ಸಾಲ ಪಡೆದಿರುವ 3 ಕೋಟಿ ರೈತರಿಗೆ 3 ತಿಂಗಳ ಕಾಲ ಸಾಲ ಮರು ಪಾವತಿ ವಿಸ್ತರಣೆ ಸೌಲಭ್ಯವನ್ನು ನೀಡುವುದು. (ಮಾರ್ಚ್ 01 2020 ರಿಂದ ಮೇ 31 2020 ರವರೆಗೆ)
- ಸುಮಾರು 25 ಲಕ್ಷ ಹೊಸ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು 25 ಸಾವಿರ ಸಾಲ ಮಿತಿಯೊಂದಿಗೆ ಮಂಜೂರು ಮಾಡುವುದು.
- 01.03.2020 ರಿಂದ 03.04.2020 ರವರೆಗೆ ಕೃಷಿಯಲ್ಲಿ 86,600 ಕೋಟಿ ರೂಪಾಯಿಗಳ ಮೌಲ್ಯದಲ್ಲಿ 63 ಲಕ್ಷ ಕೃಷಿ ಸಾಲವನ್ನು ಅನುಮೋದಿಸಲಾಗಿದೆ.
- ಮಾರ್ಚ್ 2020 ರಿಂದ ಸರ್ಕಾರಿ ಸಂಸ್ಥೆಗಳಲ್ಲಿ ಕೃಷಿ ಉತ್ಪನ್ನ ಸಂಗ್ರಹಣೆಗಾಗಿ 6,700 ಕೋಟಿ ರೂಪಾಯಿಗಳ ಕಾರ್ಯ ಬಂಡವಾಳ ಮಿತಿಯನ್ನು ರಾಜ್ಯ ಸರ್ಕಾರಗಳಿಗೆ ಕೃಷಿ ಉತ್ಪನ್ನ ಖರೀದಿಗೆ ಒದಗಿಸಲಾಗಿದೆ.
- ನಬಾರ್ಡ್‌ನಿಂದ ಸಹಕಾರಿ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಗೆ ಮಾರ್ಚ್ 2020ರಲ್ಲಿ 29,500 ಕೋಟಿ ರೂಪಾಯಿಗಳ ಮರು ಸಾಲ ಒದಗಿಸುವುದು.
- ನಬಾರ್ಡ್ ಮೂಲಕ ರೈತರಿಗೆ 30,000 ಕೋಟಿ ಹೆಚ್ಚುವರಿ ತುರ್ತು ಕಾರ್ಯ ಬಂಡವಾಳ ನೆರವು ನೀಡುವುದು.

**ಕರ್ನಾಟಕದಲ್ಲಿ ಕಿಸಾನ್ ನಿರ್ಭರ್ ಯೋಜನೆ**

ಕೋರೊನಾ ರೋಗವನ್ನು ಹೋಗಲಾಡಿಸಿ ಭಾರತವನ್ನು ಸ್ವಾವಲಂಬಿಯನ್ನಾಗಿಸು ಉದ್ದೇಶದಿಂದ ಕೇಂದ್ರ ಸರ್ಕಾರ ಆತ್ಮ ನಿರ್ಭರ್ ಯೋಜನೆಯನ್ನು ಜಾರಿಗೆ ತಂದಿತು. ಇದನ್ನು ಅನುಸರಿಸಿ ಕರ್ನಾಟಕ ರಾಜ್ಯ ಸರ್ಕಾರವು ಎಲ್ಲ ದುರ್ಬಲ ವರ್ಗದವರಿಗೆ 1,610 ಕೋಟಿ ರೂಪಾಯಿಗಳ ಪ್ಯಾಕೇಜ್ ಘೋಷಿಸಿತು. ಈ ಯೋಜನೆಯನ್ನು ಸ್ವಾಗತಿಸಿದ ಕರ್ನಾಟಕ ಸರ್ಕಾರ ಸ್ವಾವಲಂಬಿ ಮತ್ತು ಸಧೃಡ ರೈತರ ಅಭಿವೃದ್ಧಿಗಾಗಿ ಯೋಜನೆ ರೂಪಿಸಿ ಅವುಗಳನ್ನು ಜಾರಿಗೆ ತಂದು ರಾಷ್ಟ್ರದಲ್ಲಿಯೇ ಇತರ ರಾಜ್ಯಗಳಿಗೆ ಮಾದರಿಯಾಗುವಂತಹ ಉತ್ತಮ ಕೆಲಸಗಳನ್ನು ನಿರ್ವಹಿಸುತ್ತಿರುವುದು ಶ್ಲಾಘನೀಯವಾಗಿದೆ.

ಕರ್ನಾಟಕ ರಾಜ್ಯ ಸರ್ಕಾರವು ರಾಜ್ಯದಲ್ಲಿರುವಂತಹ ರೈತರಿಗೆ ಸಂಕಷ್ಟ ಸಮಯದಲ್ಲಿ ಅನುಕೂಲ ಮಾಡಿಕೊಡುವ ಸಲುವಾಗಿ ಅನೇಕ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಆ ಯೋಜನೆಗಳನ್ನು ಈ ಕೆಳಗಿನಂತೆ ಕಾಣಬಹುದು.

- ಕರ್ನಾಟಕ ಸರ್ಕಾರವು 16/05/2020 ರಂದು ವಿಶೇಷ ರಾಜ್ಯಪತ್ರದ ಮೂಲಕ ಕೃಷಿ ಮಾರಾಟ ನಿಯಂತ್ರಣ ಮತ್ತು ಅಭಿವೃದ್ಧಿ ಶಾಸನದ ತಿದ್ದುಪಡಿ ಮಾಡಿ " ಒನ್ ಇಂಡಿಯಾ, ಒನ್ ಆಗ್ರಿಕಲ್ಚರ್ ಮಾರ್ಕೆಟ್" ಎಂಬ ಧ್ಯೇಯ ವಾಕ್ಯದಡಿಯಲ್ಲಿ ವ್ಯವಹಾರಕ್ಕೆ ಸದಾವಕಾಶ ಮಾಡಿಕೊಡುವುದು.
- ಲೌಕ್‌ಡೌನ್ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಹೂ ಬೆಳೆಗಾರರಿಗೆ ಗರಿಷ್ಠ 1 ಹೆಕ್ಟೇರ್‌ಗೆ 25,000 ರೂಪಾಯಿಗಳ ಪರಿಹಾರ ನೀಡುವುದು.
- ಕೃಷಿ ಕೈಗಾರಿಕೆಗಳ ಪುನರುಜ್ಜೀವನಕ್ಕಾಗಿ ಎಮ್.ಎಸ್.ಎಮ್.ಇ ಗಳಿಗೆ ಎರಡು ತಿಂಗಳ ವಿದ್ಯುತ್ ಶುಲ್ಕವನ್ನು ಮನ್ನಾ ಮಾಡುವುದು, ದೊಡ್ಡ ಕೈಗಾರಿಕೆಗಳಿಗೆ ಎರಡು ತಿಂಗಳವರೆಗೆ ದಂಡ ಮತ್ತು ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ ಮಾಡಿ ಕೊಡುವುದು.
- 54,000 ಕೈ ಮಗ್ಗ ನೌಕಾರರಿಗೆ ' ಮುಖ್ಯಮಂತ್ರಿ ನೇಕಾರ ಸಮ್ಮಾನ ಯೋಜನೆ' ಘೋಷಣೆ, ಸಾಲ ನೀಡಿಕೆ ಮತ್ತು ಸಾಲ ಮರುಪಾವತಿಗೆ ಸದಾವಕಾಶ ಮಾಡಿಕೊಡುವುದು.
- ಹಣ್ಣು ಮತ್ತು ತರಕಾರಿ ಬೆಳಗಾರರಿಗೆ 152 ಕೋಟಿ ರೂಪಾಯಿಗಳ ಪರಿಹಾರ ನೀಡುವುದು.
- ಮಗ್ಗದ ಕಾರ್ಮಿಕರಿಗೆ, ಮೆಕ್ಕೆ ಜೋಳ ಬೆಳಗಾರರಿಗೆ ಮತ್ತು ಮೇಕೆ ಕುರಿಗಳು ನೈಸರ್ಗಿಕ ವಿಕೋಪದಿಂದ ಸಾವನ್ನಪಿದರೆ ಪರಿಹಾರ ನೀಡುವುದು.
- ರೈತರಿಗೆ ನೇರ ಮಾರುಕಟ್ಟೆ ಸೌಲಭ್ಯ ಮತ್ತು ಬೆಂಬಲ ಬೆಲೆ ಅವಧಿ ವಿಸ್ತರಣೆ ಮಾಡುವುದು.
- ಭೂ ಸುಧಾರಣಾ ಕಾಯ್ದೆಯ ತಿದ್ದುಪಡಿ ಮಾಡುವುದು.

ಹೀಗೆ ಇದಷ್ಟೇ ಅಲ್ಲದೇ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಸರ್ಕಾರ ಜಾರಿಗೆ ತಂದಿದ್ದು, ರೈತರಿಗೆ ಸಂಕಷ್ಟದ ಸಂದರ್ಭದಲ್ಲಿ ಅನುಕೂಲವಾಗುವಂತೆ ಮಾಡಿಕೊಟ್ಟಿದೆ. ಅದರೊಂದಿಗೆ ಕೃಷಿ ವಲಯವನ್ನು ಅಭಿವೃದ್ಧಿ ಪಡಿಸಿ ರೈತರಿಗೆ ನೆರವಾಗಿರುವುದನ್ನು ಕಾಣಬಹುದು.

**ಕೋಷ್ಟಕ 1: ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿಯಲ್ಲಿ ರಾಜ್ಯವಾರು ಫಲಾನುಭ ಪಡೆದ ರೈತರ ಪ್ರಮಾಣ**

| **ರಾಜ್ಯ** | ಅರ್ಜಿ ಸಲ್ಲಿಸಿರುವ ರೈತರ ಸಂಖ್ಯೆ (ಲಕ್ಷಗಳಲ್ಲಿ) | ಅರ್ಜಿ ಸಲ್ಲಿಕೆಯಾಗಿರುವ ಒಟ್ಟು ಪ್ರದೇಶ (ಲಕ್ಷಗಳಲ್ಲಿ) | ಫಲಾನುಭವ ಪಡೆದಿರುವ ಒಟ್ಟು ರೈತರ ಸಂಖ್ಯೆ (ಲಕ್ಷಗಳಲ್ಲಿ) |
|---|---|---|---|
| ಕರ್ನಾಟಕ | 21.316 | 21.668 | 6.869 |
| ಮಧ್ಯ ಪ್ರದೇಶ | 78.929 | 112.682 | 30.546 |
| ಮಹಾರಾಷ್ಟ್ರ | 145.642 | 79.223 | 87.895 |
| ತಮಿಳುನಾಡು | 38.705 | 14.347 | 13.213 |
| ಉತ್ತರ ಪ್ರದೇಶ | 46.947 | 35.572 | 9.343 |
| ರಾಜಸ್ಥಾನ | 85.260 | 96.935 | 25.574 |

ಮೂಲ: FY 2019-20 - PMFBY & RWBCIS combined - State Wise Business Statistics as on 31.08.2021

ಅಂಡಮಾನ್ ಮತ್ತು ನಿಕೋಬಾರ್, ಅಸ್ಸಾಂ, ಸಿಕ್ಕಿಂ, ಜಾರ್ಖಂಡ್, ಒಡಿಸ್ಸಾ, ಪುತುಚೇರಿ ಮತ್ತು ತೆಲಂಗಾಣ ಈ ರಾಜ್ಯಗಳಲ್ಲಿ ಇರುವ ರೈತರು ಅಲ್ಪ ಪ್ರಮಾಣದಲ್ಲಿ ಬೆಳೆ ನಾಶ ವಿಮೆಗಾಗಿ ಅರ್ಜಿ ಸಲ್ಲಿಸಿದ್ದರೂ ಯಾವುದೇ ರೈತರಿಗೆ ವಿಮೆ ನೀಡದಿರುವುದನ್ನು ಕಾಣಬಹುದಾಗಿದೆ. ಬಿಹಾರ, ಜಮ್ಮು ಕಾಶ್ಮೀರ ಮತ್ತು ಪಶ್ಚಿಮ ಬಂಗಾಳ ಈ ಮೂರು ರಾಜ್ಯಗಳಲ್ಲಿ ಫಸಲ್ ಭೀಮಾ ಯೋಜನೆಗೆ ಯಾವುದೇ ರೀತಿಯ ಅರ್ಜಿ ಸಲ್ಲಿಸಿರುವುದಿಲ್ಲ ಮತ್ತು ಬೆಳೆ ವಿಮೆ ಹಣವನ್ನು ಪಡೆದಿರುವುದಿಲ್ಲ.

**ಕೋಷ್ಟಕ 2: 2021–22 ಸಾಲಿನ ರಾಜ್ಯಗಳಿಗೆ ಪಿಎಂ ಕಿಸಾನ್ ಹಣ ವಿತರಣೆಯಾಗಿರುವ ಶೇಕಡವಾರು ಪ್ರಮಾಣ**

| ಶೇಕಡವಾರು | ಕಂತುಗಳು | | |
|---|---|---|---|
| | 1 | 2 | 3 |
| 00-20 | 0 | 0 | 0 |
| 20-40 | 0 | 0 | 1 |
| 40-60 | 5 | 5 | 3 |
| 60-80 | 4 | 4 | 5 |
| 80-100 | 19 | 20 | 20 |

ಮೂಲ: https://pmkisan.gov.in/

ಈ ಮೇಲ್ಕಂಡ ಕೋಷ್ಟಕದಲ್ಲಿ 2021–22 ನೇ ಸಾಲಿನಲ್ಲಿ ಪಿಎಂ ಕಿಸಾನ್ ಯೋಜನೆಯ ಹಣವು ಮೂರು ಕಂತುಗಳಲ್ಲಿ ವಿತರಣೆಯಾಗುರುವುದನ್ನು ಕಾಣಬಹುದಾಗಿದೆ. ಮೊದಲ ಕಂತಿನಲ್ಲಿ 40–60 ರಷ್ಟು ಹಣವನ್ನು 5 ರಾಜ್ಯಗಳು, 60–80 ರಷ್ಟು ಹಣವನ್ನು 4 ರಾಜ್ಯಗಳು ಮತ್ತು 80–100 ರಷ್ಟು ಹಣವನ್ನು 19 ರಾಜ್ಯಗಳು ಪಡೆದಿರುವುದನ್ನು ಕಾಣಬಹುದಾಗಿದೆ. ಎರಡನೇ ಕಂತಿನಲ್ಲಿ 40–60 ರಷ್ಟು ಹಣವನ್ನು 5 ರಾಜ್ಯಗಳು, 60–80 ರಷ್ಟು ಹಣವನ್ನು 4 ರಾಜ್ಯಗಳು ಮತ್ತು 80–100 ರಷ್ಟು ಹಣವನ್ನು 20 ರಾಜ್ಯಗಳು ಪಡೆದಿರುವುದನ್ನು ಕಾಣಬಹುದಾಗಿದೆ. ಮೂರನೇ ಕಂತಿನಲ್ಲಿ 20–40 ರಷ್ಟು ಹಣವನ್ನು 1 ರಾಜ್ಯ, 40–60 ರಷ್ಟು ಹಣವನ್ನು 3 ರಾಜ್ಯಗಳು, 60–80 ರಷ್ಟು ಹಣವನ್ನು 5 ರಾಜ್ಯಗಳು ಮತ್ತು 80–100 ರಷ್ಟು ಹಣವನ್ನು 20 ರಾಜ್ಯಗಳು ಪಡೆದಿರುವುದನ್ನು ಕಾಣಬಹುದಾಗಿದೆ. ಮೂರನೇ ಕಂತಿನಲ್ಲಿ ಇಕೆವೈಸಿ ಪ್ರಕ್ರಿಯೆ ನಡೆಯುತ್ತಿರುವುದರಿಂದ ಕರ್ನಾಟಕವು ಸೇರಿದಂತೆ 9 ರಾಜ್ಯಗಳಲ್ಲಿ ಪೂರ್ಣ ಪ್ರಮಾಣದ ಹಣವನ್ನು ಪಡೆಯಾಗಿಲ್ಲ.

**ಕೋಷ್ಟಕ 3: ರಾಜ್ಯವಾರು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯ ಅಂಕಿ ಅಂಶ**

| ರಾಜ್ಯ | ಸಹಕಾರಿ ಬ್ಯಾಂಕುಗಳು | | ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು | | ವಾಣಿಜ್ಯ ಬ್ಯಾಂಕುಗಳು | |
|---|---|---|---|---|---|---|
| | No of Operative | | No of Operative | | No of Operative | |
| | 2019 | 2020 | 2019 | 2020 | 2019 | 2020 |
| ಕರ್ನಾಟಕ | 2509 | 2742 | 631 | 536 | 852 | 831 |
| ಮಧ್ಯ ಪ್ರದೇಶ | 4614 | 3711 | 467 | 470 | 1651 | 1716 |
| ಮಹಾರಾಷ್ಟ್ರ | 3177 | 3153 | 329 | 357 | 2146 | 2242 |
| ತಮಿಳುನಾಡು | 1479 | 1330 | 3 | 33 | 550 | 585 |
| ಉತ್ತರ ಪ್ರದೇಶ | 3202 | 2654 | 3436 | 3361 | 4499 | 4315 |
| ರಾಜಸ್ಥಾನ | 3005 | 2995 | 661 | 607 | 2060 | 2045 |
| ಕೇರಳ | 836 | 2742 | 631 | 536 | 313 | 381 |
| ತೆಲಂಗಾಣ | 822 | 814 | 146 | 161 | 1775 | 1965 |
| ಬಿಹಾರ್ | 253 | 240 | 1390 | 1400 | 1240 | 1161 |
| ಆಂಧ್ರ ಪ್ರದೇಶ | 1563 | 1440 | 1015 | 1059 | 1964 | 2024 |

ಮೂಲ: Trend and Progress of Banking in India 2019-20 ವರದಿ

ಈ ಮೇಲ್ಕಂಡ ಕೋಷ್ಟಕದಲ್ಲಿ ಕರ್ನಾಟಕದಲ್ಲಿ 2019 ನೇ ಸಾಲಿನಲ್ಲಿ ಸಹಕಾರಿ ಬ್ಯಾಂಕುಗಳ ಮೂಲಕ ಕ್ರೆಡಿಟ್ ಕಾರ್ಡ್ ಪಡೆದವರ ಸಂಖ್ಯೆ 2,509 ಆಗಿದೆ. 2020ನೇ ಸಾಲಿನಲ್ಲಿ 2,742 ರೈತರು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಪಡೆದಿರುತ್ತಾರೆ. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ 2019 ನೇ ಸಾಲಿನಲ್ಲಿ 631 ರೈತರು ಮತ್ತು 2020ನೇ ಸಾಲಿನಲ್ಲಿ 536 ರೈತರು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಪಡೆದಿರುತ್ತಾರೆ. ವಾಣಿಜ್ಯ ಬ್ಯಾಂಕುಗಳಲ್ಲಿ 2019 ನೇ ಸಾಲಿನಲ್ಲಿ 852 ರೈತರು ಮತ್ತು 2020ನೇ ಸಾಲಿನಲ್ಲಿ 831 ರೈತರು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಪಡೆದಿರುತ್ತಾರೆ. ಹೀಗೆ ಉಳಿದ ರಾಜ್ಯಗಳಲ್ಲೂ ಕಾಣಬಹುದಾಗಿದೆ.

**ಕಿಸಾನ್ ನಿರ್ಭರ್ ಭಾರತ ಯೋಜನೆಯಲ್ಲಿರುವಂತಹ ಸವಾಲುಗಳು**

- ಆತ್ಮ ನಿರ್ಭರ್ ಭಾರತ ಯೋಜನೆಯು ಎಲ್ಲಾ ರೈತಾಪಿ ವರ್ಗಗಳಿಗೆ ತಲುಪಲು ಸಾಧ್ಯವಾಗಲಿಲ್ಲ. ಏಕೆಂದರೆ ಭಾರತದಲ್ಲಿರುವ ಇನ್ನು ಅನೇಕ ರೈತರ ಹೆಸರಿನಲ್ಲಿ ಭೂ ದಾಖಲೆಗಳು ಇಲ್ಲದಿರುವ ಅಥವಾ ಭೂ ದಾಖಲೆಗಳು ಕುಟುಂಬದ ಒಬ್ಬರಲ್ಲಿಯೇ ಕೇಂದ್ರಿಕೃತವಾಗಿರುವುದರಿಂದ ಎಲ್ಲಾ ರೈತರಿಗೆ ತಲುಪುವಲ್ಲಿ ವಿಫಲವಾಗಿದೆ.
- ರೈತರು ನಿರೀಕ್ಷಿಸಿದ್ದ ಕನಿಷ್ಠ ಬೆಂಬಲ ಬೆಲೆ ಯೋಜನೆಯು ಅವರ ಕನಸನ್ನು ಪೂರ್ಣಗೊಳಿಸಲಿಲ್ಲ.
- ಪಿಎಂ ಕಿಸಾನ್ ಯೋಜನೆಯಲ್ಲಿ ರೈತರ ಹೆಸರಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ರೈತರಲ್ಲದವರು ಹಣ ಪಡೆಯುತ್ತಿರುವುದನ್ನು ಕಾಣಬಹುದು ಈ ಯೋಜನೆಯು ಸಹ ಪೂರ್ಣ ಪ್ರಮಾಣದಲ್ಲಿ

ಸಫಲವಾಗಿಲ್ಲ. ಅದರ ಜೊತೆಗೆ ಬಹುತೇಕ ಕಂತುಗಳು ಪ್ರಮಾಣಿಕ ರೈತಾಪಿ ವರ್ಗದವರಿಗೆ ಜಮೆಯಾಗದಿರುವುದು ಶೋಚನೀಯ.

- ಫಸಲ್ ಭೀಮಾ ಯೋಜನೆಯಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತಿದ್ದು, ಬೆಳೆ ನಾಶವಾದ ರೈತರಿಗೆ ಆ ಯೋಜನೆಯು ಶೀರ್ಘವಾಗಿ ದೊರಕದೇ ಇರುವುದನ್ನು ಕಾಣಬಹುದು.
- ಭಾರತದಲ್ಲಿರುವ ಬಹುತೇಕ ರೈತರು ಅನಕ್ಷರಸ್ಥರಾಗಿದ್ದು ಮತ್ತು ಗ್ರಾಮೀಣ ಪ್ರದೇಶದಲ್ಲಿರುವ ಹೆಚ್ಚಿನ ರೈತರಿಗೆ ಕಿಸಾನ್ ನಿರ್ಭರ್ ಯೋಜನೆಯ ಬಗ್ಗೆ ಅಷ್ಟಾಗಿ ಅರಿವಿಲ್ಲದ ಕಾರಣ ಈ ಯೋಜನೆಯು ರೈತಾಪಿ ವರ್ಗಕ್ಕೆ ಪೂರ್ಣ ಪ್ರಮಾಣದಲ್ಲಿ ದೊರೆಯಲು ಸಾಧ್ಯವಾಗಿಲ್ಲ.
- ರೈತರಿಗೆ ಕೋವಿಡ್ 19 ಸಂದರ್ಭದಲ್ಲಿ ಸಾಲ ಮರು ಪಾವತಿಗಾಗಿ 3 ತಿಂಗಳ ಕಾಲ ಕಾಲಾವಕಾಶ ನೀಡಲಾಯಿತು. ಆದರೆ ಯಾವುದೇ ರೀತಿಯ ಬೆಳೆಯನ್ನು ಉತ್ಪಾದಿಸಲಾಗದ ರೈತನೂ ಮೂರು ತಿಂಗಳ ನಂತರವೂ ಸಾಲ ಮರು ಪಾವತಿ ಮಾಡಲು ಸಾಧ್ಯವೇ ಎಂಬುದು ಗಮನಿಸಬೇಕಾದ ಅಂಶವಾಗಿದೆ.
- ಆತ್ಮ ನಿರ್ಭರ್ ಭಾರತ ಯೋಜನೆಯಡಿಯಲ್ಲಿ ಕೃಷಿಗೆ ನೀಡಿರುವ ಸವಲತ್ತುಗಳು ಎಲ್ಲಾ ರೈತರಿಗೆ ತಿಳಿಯದೇ ಇರುವ ಕಾರಣ ಅವುಗಳ ಪ್ರಯೋಜನ ಪಡೆಯಲು ರೈತರಿಗೆ ಅಸಾಧ್ಯ.
- ಫಸಲ್ ಭೀಮಾ ಯೋಜನೆಯಡಿಯಲ್ಲಿ ರೈತರು ವಿಮೆ ಮೊತ್ತ ಪಡೆಯುವಲ್ಲಿ ಅನೇಕ ತೊಡಕುಗಳನ್ನು ಎದುರಿಸುತ್ತಿದ್ದಾರೆ. ಉದಾ: ಅಧಿಕಾರಿಗಳು ವಿಮೆ ಮೊತ್ತ ನೀಡಲು ಅಥವಾ ಬೆಳೆ ನಾಶ ಧೃಢೀಕರಣ ಪತ್ರವನ್ನು ನೀಡಲು ರೈತರ ಬಳಿ ಲಂಚವನ್ನು ಪಡೆಯುತ್ತಿರುವುದು.

**ಸಲಹೆಗಳು**

- ಕೋವಿಡ್ ಸಂದರ್ಭದಲ್ಲಿ ಅನೇಕ ನಷ್ಟವನ್ನು ಅನುಭವಿಸಿರುವ ರೈತರಿಗೆ ಸಾಲ ಮರುಪಾವತಿಗೆ ಕಾಲಾವಕಾಶ ಕೊಡುವುದರ ಬದಲು ಸಾಲ ಮನ್ನ ಯೋಜನೆಯನ್ನು ಜಾರಿಗೊಳಿಸುವುದು.
- ಪಿಎಂ ಕಿಸಾನ್ ಯೋಜನೆಯಲ್ಲಿನ ಅಕ್ರಮಗಳನ್ನು ಪತ್ತೆ ಹಚ್ಚಿ ಪ್ರಮಾಣಿಕ ರೈತರಿಗೆ ಹಣ ಬರಬೇಕಿರುವ ಇನ್ನೂ ಅನೇಕ ಕಂತುಗಳನ್ನು ಅವರ ಖಾತೆಗೆ ಜಮೆ ಮಾಡಬೇಕು.
- ಆತ್ಮ ನಿರ್ಭರ್ ಭಾರತ ಯೋಜನೆಯಡಿ ಕೃಷಿಗೆ ನೀಡಿರುವ ಸವಲತ್ತುಗಳ ಬಗ್ಗೆ ರೈತರಿಗೆ ಅರಿವು ಮತ್ತು ಜಾಗೃತಿ ಮೂಡಿಸುವುದು.
- ರೈತರು ಬೆಳೆದ ಬೆಳೆಗೆ ಸೂಕ್ತ ರೀತಿಯಾದ ಕನಿಷ್ಠ ದರವನ್ನು ನಿಗದಿಪಡಿಸುವುದು

**ಉಪಸಂಹಾರ**

ಭಾರತದ ಕೃಷಿ ಉದ್ಯಮ, ರೈತರು ಮತ್ತು ಗ್ರಾಮೀಣ ಪ್ರದೇಶದ ಜನರು ಭಾರತದ ಆತ್ಮ ನಿರ್ಭರ್ ಭಾರತದ ಕನಸಿನ ಮೂಲವಾಗಿದ್ದಾರೆ. ಅವರು ಬಲಿಷ್ಠರಾದಷ್ಟೂ ಭಾರತದ ಅಡಿಪಾಯ ಬಲಿಷ್ಠವಾಗುತ್ತದೆ ಎಂದು ಭಾರತದ ಪ್ರಧಾನ ಮಂತ್ರಿಯಾದ ನರೇಂದ್ರ ಮೋದಿಯವರು ಹೇಳಿದ್ದಾರೆ. ಆದ್ದರಿಂದ ಸಾಂಕ್ರಾಮಿಕ ರೋಗವಾದ ಕೋವಿಡ್ 19 ನಿಂದ ಉದ್ಭವಿಸಿದ ಎಲ್ಲ ರೀತಿಯ ಅಪಾಯದ ಪರಿಸ್ಥಿತಿಯನ್ನು

ಪರಿಣಾಮಕಾರಿಯಾಗಿ ನಿರ್ವಹಿಸಲು ಕೇಂದ್ರ ಸರ್ಕಾರ ' ಆತ್ಮ ನಿರ್ಭರ್ ಭಾರತ' ಎಂಬ ಅಭಿಯಾನ ಮತ್ತು ಯೋಜನೆಯನ್ನು ಕಾರ್ಯಗತಗೊಳಿಸಿತು.. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ ರೈತರನ್ನು ಕೇವಲ ಕೃಷಿಕರನ್ನಾಗಿಸದೆ ಅವರನ್ನು ಉದ್ಯಮಶೀಲರನ್ನಾಗಿಸುವ ಉದ್ದೇಶವನ್ನು ಹೊಂದಿದೆ. ಒಟ್ಟಾರೆಯಾಗಿ ರೈತರನ್ನು ಕೃಷಿಯಲ್ಲಿ ಸ್ವಾವಲಂಬನೆ ಮಾಡುವುದರೊಂದಿಗೆ ಮಾರುಕಟ್ಟೆ ಸೌಲಭ್ಯ, ಹಣಕಾಸಿನ ಸೌಲಭ್ಯ, ಸಾಲ ಮನ್ನ, ಸಾಲ ಮರು ಪಾವತಿ ವಿಸ್ತರಣೆ, ಬೆಳೆ ನಷ್ಟ ಪರಿಹಾರ, ಸಂಸ್ಕರಣಾ ಘಟಕಗಳ ಸ್ಥಾಪನೆ ಹೀಗೆ ಇನ್ನೂ ಅನೇಕ ಯೋಜನೆಗಳನ್ನು ಆತ್ಮ ನಿರ್ಭರ್ ಭಾರತ ಯೋಜನೆಯಲ್ಲಿ ರೂಪಿಸಿದೆ. ಇದೆ ಹಾದಿಯನ್ನು ಅನುಸರಿಸಿದ ಕರ್ನಾಟಕ ಸರ್ಕಾರವು ಸಹ ರೈತರಿಗೆ ನೆರವಾಗುವಂತಹ ಅನೇಕ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಅದು ಕಾರ್ಯ ರೂಪಕ್ಕೆ ತಂದು ರೈತರಿಗೆ ನೆರವಾಗುತ್ತಿರುವುದನ್ನು ಕಾಣಬಹುದು.

**ಪರಾಮರ್ಶನ ಗ್ರಂಥಗಳು**


- ನರೇಂದ್ರ ಸಿಂಗ್ ತೋಮರ್ (ಡಿಸೆಂಬರ್ 2020). ಆತ್ಮನಿರ್ಭರ ಭಾರತ ಅಭಿಯಾನ ಭಾರತವನ್ನು ಸಶಕ್ತಗೊಳಿಸುವ ಒಂದು ಉಪಕ್ರಮ. ಗ್ರಾಮೋದಯ ಸಂಕಲ್ಪ ನಿಯತಕಾಲಿಕೆ, ಸಂ.11 (9), ಪು. 6–9
- ಹಿರೇಮಠ ಜಿ. ಎಮ್ ಮತ್ತು ಅಮೃತ ಟಿ. ಜೋಶಿ (ಜನವರಿ 2021). ಆತ್ಮನಿರ್ಭರ ಕೃಷಿಯಿಂದ ಆತ್ಮ ನಿರ್ಭರ ಭಾರತ. ಕೃಷಿಪೇಟೆ ನಿಯತಕಾಲಿಕೆ, ಸಂ.50 (12) ಪು. 28–32
- ಶರಶ್ಚಂದ್ರ ರಾನಡೆ ಜಿ. (ಆಗಸ್ಟ್ 2020). ಕೋವಿಡ್ 19 ಎದುರಿಸಲು ಕರ್ನಾಟಕ ಸರ್ಕಾರದ ಕಿಸಾನ್ ನಿರ್ಭರ್ ಯೋಜನೆ. ಕೃಷಿಪೇಟೆ ನಿಯತಕಾಲಿಕೆ, ಸಂ. 46(8). ಪು.18–22
- ಶರಶ್ಚಂದ್ರ ರಾನಡೆ ಜಿ. (ಡಿಸೆಂಬರ್ 2021). ರೈತನನ್ನು ಆತ್ಮ ನಿರ್ಭರ್ (ಸ್ವಾವಲಂಬಿ) ಮಾಡುವ ಉದ್ದೇಶದ ಕೃಷಿ ಮೂಲಭೂತ ಸೌಕರ್ಯ ನಿಧಿ ಯೋಜನೆ. ಕೃಷಿಪೇಟೆ ನಿಯತಕಾಲಿಕೆ, ಸಂ.47(12), ಪು.ಸಂ 7–14
- Prabha, Brejesh Kumar S. K. Goyal R. K. Goya and Shreeram Sing. (2015). Indian agriculture and rural development and five year plans: an appraisal. *Research and education development society*.